ಕಂಪನಿಗಳು ರಫ್ತು ಮಾಡಿದ ಪ್ರಮಾಣವನ್ನು ಘೋಷಿಸಲೇ ಬೇಕೆಂಬುದರ ಬಗ್ಗೆ ಯಾವುದೇ ಅಧ್ಯಾದೇಶವೂ ಇರುವುದಿಲ್ಲ.

ಈ) ಕಂಡಿಕೆ 'ಇ' ನಲ್ಲಿನ ಉತ್ತರದನ್ವಯ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಅನುಬಂಧ - 1

1. **ಮಂಗಳೂರು ಬಂದರಿನಿಂದ ಗ್ರಾನೈಟ್ ರಫ್ತು ಮಾಡುವ ಕಂಪನಿಗಳ ಹೆಸರು ಮತ್ತು ವಿಳಾಸಗಳು :**

(ಅ) ಎಕ್ಸಪೋ ಮೆರೈನ್ ಸರ್ವೀಸ್, ಮಂಗಳೂರು.

(ಆ) ಕಾರ್ಗೋಲಿನ್ ಏಜೆನ್ಸಿ, ಮಂಗಳೂರು.

(ಇ) ಹೀರಾಲಾಲ್ ಅಂಡ್ ಕಂಪನಿ, ಮಂಗಳೂರು.

(ಈ) ದೀಪಕ್ ಗ್ಲೋಬಲ್ ಶಿಪ್ಪಿಂಗ್ ಏಜೆನ್ಸಿ, ಮಂಗಳೂರು.

(ಉ) ಹಸ್ಸನ್ ಹಾಜಿ ಅಂಡ್ ಕಂಪನಿ, ಮಂಗಳೂರು.

(ಊ) ಜೆ.ಕೆ. ಶಿಪ್ಪಿಂಗ್ ಕಂಪನಿ, ಮಂಗಳೂರು.

(ಋ) ಗಣೇಶ್ ಶಿಪ್ಪಿಂಗ್ ಏಜೆನ್ಸಿ, ಮಂಗಳೂರು.

(ೠ) ಕೊಚ್ಚಿನ್ ಶಿಪ್ಪಿಂಗ್ ಕಂಪನಿ, ಮಂಗಳೂರು.

(ಎ) ಆಳ್ವಾರೀಸ್ ಅಂಡ್ ಥಾಮಸ್ ಕಂಪನಿ ಮಂಗಳೂರು.

(ಏ) ಎಕ್ಸ್‌ಪೋರ್ಟ್ ಟ್ರೇಡಲಿಂಕ್ಸ್, ಮಂಗಳೂರು.

2. ಮಂಗಳೂರು ಬಂದರಿನಿಂದ 1994-95ರ ಸಾಲಿನ 152726 ಘ.ಮೀ. ಗ್ರಾನೈಟನ್ನು ರಫ್ತು ಮಾಡಲಾಗಿದೆ.

3. ಮಂಗಳೂರು ಬಂದರಿನಿಂದ ಗ್ರಾನೈಟನ್ನು ಈ ಕೆಳಕಂಡ ದೇಶಗಳಿಗೆ ರಫ್ತು ಮಾಡಲಾಗಿದೆ.

(ಅ) ಇಟಲಿ,

(ಆ) ಜಪಾನ್, ಮತ್ತು

(ಇ) ತೈವಾನ್.

ರಾಜ್ಯದಲ್ಲಿ ಆಕ್ಟ್ರಾಯ್ ಪದ್ಧತಿ ಜಾರಿಗೆ ತರುವ ಯೋಜನೆ

60 - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ನಗರಾಭಿವೃದ್ಧಿ ಕಾಡಾ, ಮತ್ತು ಹೈದ್ರಾಬಾದ ಅಭಿವೃದ್ಧಿ ಮಂಡಲಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮತ್ತೆ ಆಕ್ಟ್ರಾಯ್ ಪದ್ಧತಿಯನ್ನು ಪುರಸಭೆಗಳಿಗೆ ಜಾರಿಗೆ ತರುವ ಯೋಜನೆ ಸರ್ಕಾರದವರ ಮುಂದಿದೆಯೇ?

ಅ) ಹಾಗಿದ್ದಲ್ಲಿ ಪುರಸಭೆಗಳ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಮತ್ತು ಹೈದ್ರಾಬಾದ್ ಕಾರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :

ಅ) ಇಲ್ಲಾ.

ಆ) ಪುರಸಭೆಗಳ ಆರ್ಥಿಕ ಪರಿಸ್ಥಿತಿಯನ್ನು ವಿಮರ್ಶಿಸಿ ಪರಿಸ್ಥಿತಿಯನ್ನು ಸುಧಾರಿಸುವ ಬಗ್ಗೆ ಸಲಹೆ ನೀಡಲು ಆರ್ಥಿಕ ಆಯೋಗವನ್ನು ರಚಿಸಿದೆ. ಆರ್ಥಿಕ ಆಯೋಗದ ವರದಿಯನ್ನು ಕಾಯಲಾಗಿದೆ.

ರೇಷ್ಮೆ ಬೆಲೆ ನಿಗಧಿಮಾಡುವಲ್ಲಿ ಸರ್ಕಾರದ ನಿಲುವು

135 - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ರೇಷ್ಮೆ ಕೃಷಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೇಷ್ಮೆಗೆ ಕನಿಷ್ಟ ಬೆಲೆ ನಿಗಧಿ ಮಾಡುವ ವಿಷಯದಲ್ಲಿ ರಾಜ್ಯ ಸರ್ಕಾರದ ನಿಲುವೇನು?

ಆ) ಈ ವಿಷಯದ ಬಗ್ಗೆ ರೈತರ ಸಮಿತಿಯನ್ನು ರಚಿಸಲಾಗುವುದೆ?

ಶ್ರೀ ಡಿ. ನಾಗರಾಜಯ್ಯ (ರೇಷ್ಮೆ ರಾಜ್ಯ ಸಚಿವರು) :

ಅ) ಕಚ್ಚಾ ರೇಷ್ಮೆಗೆ ಕನಿಷ್ಟ ಬೆಲೆ ನಿಗಧಿಪಡಿಸುವ ವಿಷಯವು ಸರ್ಕಾರದ ನೀತಿಯಾಗಿದೆ.

ಆ) ಈ ವಿಷಯದಲ್ಲಿ ರೇಷ್ಮೆ ಬೆಳೆಗಾರರು, ರೇಷ್ಮೆ ನೇಕಾರರು ಹಾಗೂ ರೇಷ್ಮೆ ನೂಲು ಬಿಚ್ಚುವವರನ್ನೊಳಗೊಂಡ ಸಮಿತಿಯನ್ನು ರಚಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಕರಿಕಲ್ಲು ಸಾಗಿಸುವುದರಿಂದ ಪ್ರಕೃತಿಯ ಮೇಲಾದ ಪರಿಣಾಮ

136 - ಶ್ರೀ ಕೆ. ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಕೃತಿಯಲ್ಲಿ ಸಿಗುವ ಕರಿಕಲ್ಲುಗಳನ್ನು ವ್ಯಾಪಾರ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇದರಿಂದ ಪ್ರಕೃತಿಯ ಮೇಲೆ ಆಗುವ ಪರಿಣಾಮದ ಬಗ್ಗೆ ಸರ್ಕಾರಕ್ಕೆ ಗೊತ್ತಿದೆಯೇ?

ಇ) ಈ ವ್ಯಾಪಾರದಿಂದ ರಾಜ್ಯ ಸರ್ಕಾರಕ್ಕೆ ಎಷ್ಟು ಆದಾಯ ಬರುತ್ತದೆ? (ವಿವರಗಳನ್ನು ಒದಗಿಸುವುದು)

ಶ್ರೀ ಎಸ್.ಡಿ. ಜಯರಾಮ್ (ಗಣಿ ಮತ್ತು ಭೂವಿಜ್ಞಾನ ಸಚಿವರು) :

ಅ) ಹೌದು, ಬಂದಿದೆ.

ಆ) ಹೌದು.